**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.899/2022</u>**

| | | |
|---|---|---|
| ಸಾಕ್ಷಿದಾರರ ಹೆಸರು | : ವಿ.ಎನ್. ಲತಾಮಣಿ | ಫ್ರಾಸಾ -1 |
| ಗಂಡನ ಹೆಸರು | : ಪುಟ್ಟಸ್ವಾಮೇಗೌಡ | ಚಾಸಾ-1 |
| ವಯಸ್ಸು | : 55 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯವಸಾಯ | ದಿನಾಂಕಃ20.03.2025 |
| ವಾಸಸ್ಥಳ | : ಬೆಕ್ಕಿ | |

**<u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ.ಸ.ಸ.ಅ. ರವರಿಂದ:</u>**

ನ್ಯಾಯಾಲಯದ ಮುಂದಿರುವ 3 ಮತ್ತು 4 ನೇ ಆರೋಪಿತರ ಪರಿಚಯ ನನಗಿದೆ. 1 ಮತ್ತು 2 ನೇ ಆರೋಪಿತರ ಪರಿಚಯವೂ ಸಹಾ ನನಗಿದೆ. 1 ಮತ್ತು 2 ನೇ ಆರೋಪಿತರು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸುತ್ತಾರೆ. ಚಾಸಾ-2 ನನ್ನ ತಮ್ಮ. ಚಾಸಾ-3 ನನ್ನ ತಮ್ಮನ ಹೆಂಡತಿ. ಚಾಸಾ-4 ಮತ್ತು 5 ರವರು ನಮ್ಮ ಊರುಮನೆಯವರು.

ಬಕ್ಕಿ ಗ್ರಾಮದ ಸ.ನಂ.40 ರಲ್ಲಿ 6 ಎಕರೆ 23 ಗುಂಟೆ ಜಮೀನು ನನ್ನ ಗಂಡನ ಹೆಸರಿನಲ್ಲಿ ಇದೆ. ದಿ.17.01.2022 ರಂದು ಬೆ.9.00 ಗಂಟೆಗೆ ನಾನು ಆ ಜಮೀನಿಗೆ ಕಾಫೀ ಬೆಳೆ ಹಾರಿಸಲು ಹೋಗಿದ್ದೆ. ನಮ್ಮ ಜಮೀನಿಗೆ ಮರ ಮತ್ತು ಕಲ್ಲುಕಂಬದ ಬೇಲಿಯನ್ನು ಹಾಕಿದ್ದೆವು. ಆ ಬೇಲಿಯನ್ನು ಆರೋಪಿತರು ಕೀಳಲು ಪ್ರಯತ್ನಿಸುತ್ತಿದ್ದರು. ನಾನು ಅವರನ್ನು ಪ್ರಶ್ನಿಸಿದ್ದಕ್ಕೆ 1 ನೇ ಆರೋಪಿಯು ನಿನ್ನನ್ನು ಕೊಲ್ಲುವುದಾಗಿ ನನಗೆ ಬೆದರಿಕೆ ಹಾಕಿ, ಕೆಟ್ಟ ಶಬ್ದಗಳಿಂದ ಬೈದರು. ಅವರ ಕೈಯಲ್ಲಿದ ಕತ್ತಿಯಿಂದ ನನಗೆ ಹೊಡೆಯಲು ಬಂದರು. ನಾನು ಎಡಗೈ ಅಡ್ಡಕೊಟ್ಟಾಗ ಮೊಣಕೈಗೆ ರಕ್ತಗಾಯವಾಯಿತು. ಅಲ್ಲೇ ಇದ್ದ 2 ರಿಂದ 4 ನೇ ಆರೋಪಿತರು ನನಗೆ ಕೆಟ್ಟ ಶಬ್ದಗಳಿಂದ ಬೈದು, ಬೆನ್ನಿಗೆ ಗುದ್ದಿ, ಜಡೆಯನ್ನು ಎಳೆದಾಡಿದರು. 2 ನೇ ಆರೋಪಿ ನಾನು ಧರಿಸಿದ್ದ ನೈಟಿಯನ್ನು ಹಿಡಿದು ಎಳೆದಾಡಿ ಹರಿದು ಹಾಕಿರುತ್ತಾರೆ. 1 ನೇ ಆರೋಪಿ ಮುಂದುವರೆದು ತನ್ನ ಬಳಿ ಕೋವಿ ಇದ್ದು ಒಂದಲ್ಲ ಒಂದು ದಿನ ನಿನ್ನನ್ನು ಸಾಯಿಸುತ್ತೇನೆ ಎಂದು ನನಗೆ ಫ್ರಾಣ ಬೆದರಿಕೆ ಹಾಕಿದರು. ನಂತರ ನಾನು ಅಲ್ಲಿಂದ ಮನೆಗೆ ಬಂದು ಚಾಸಾ-2 ರವರಿಗೆ ಕರೆ ಮಾಡಿದೆ. ಅವರು ನನ್ನನ್ನು ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದರು. ಅದೇದಿನ ಸ.5.30-6.00 ಗಂಟೆ ಸಮಯಕ್ಕೆ ಬಣಕಲ್ ಪೋಲಿಸರು ಆಸ್ಪತ್ರೆಗೆ ಬಂದು ನನ್ನ ಹೇಳಿಕೆ ಪಡೆದಿರುತ್ತಾರೆ. ದಿ.29.01.2022 ರಂದು ಪೋಲಿಸರು ಗಲಾಟೆಯಾದ ಜಾಗಕ್ಕೆ ಬಂದು ಮಹಜರ್ ಮಾಡಿ ಬಟ್ಟೆ ಮತ್ತು ಕತ್ತಿಯನ್ನು ಪಡೆದಿದ್ದಾರೆ. ದಿ.10.02.2022 ರಂದು ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ್ದೇನೆ.

ಸಾಕ್ಷಿಯು ದಿ.17.01.2022 ರ ಹೇಳಿಕೆ ಮತ್ತು ದಿ.29.01.2022 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ಮೂರು ಪೋಟೋವನ್ನು ಮಹಜರ್ ಕಾಲಕ್ಕೆ ತೆಗೆದ ಬಗ್ಗೆ ಗುರುತಿಸುತ್ತಾರೆ ಹಾಗೂ ನ್ಯಾಯಾಲಯದ ಮುಂದೆ ಇರುವ ಕತ್ತಿ, ಶರ್ಟ್, ಬಟ್ಟೆ ಮತ್ತು ನೈಟಿಯನ್ನು ನೋಡಿ ಗುರುತಿಸುತ್ತಾರೆ. ದೂರು ಹೇಳಿಕೆಯನ್ನು ನಿಪಿ-1, ಮಹಜರ್ ನ್ನು ನಿಪಿ-2, ಪೋಟೋಗಳನ್ನು ಸಿಡಿ ಮತ್ತು

ಪ್ರಮಾಣಪತ್ರದೊಂದಿಗೆ ನಿಪಿ-3 ರಿಂದ 7, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು. ಮುಂದುವರೆದು ಕತ್ತಿಯನ್ನು ಎಂ.ಒ.1, ಶರ್ಟ್ ನ್ನು ಎಂ.ಒ.2, ಬಟ್ಟೆಯನ್ನು ಎಂ.ಒ.3 ಮತ್ತು ನೈಟಿಯನ್ನು ಎಂ.ಒ.4 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.